ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 3, November-December 2024, Pp.41-43
©*IIMRD*, Mysuru

IIMRD JOURNALS
www.iimrd.com

# ಸ್ವಾತಂತ್ರ್ಯ ಚಳವಳಿಯ ಕಾಲಘಟ್ಟದ ಆರ್ಥಿಕ ಸ್ಥಿತಿಗತಿ ಮತ್ತು ದಾವಣಗೆರೆ ಜಿಲ್ಲೆ

**ಡಾ. ಕೃಷ್ಣಮೂರ್ತಿ ಸಿ. ಎನ್.**

ಮುಖ್ಯಸ್ಥರು, ಇತಿಹಾಸ ವಿಭಾಗ, ಬಿ.ಎಲ್.ಡಿ.ಈ ಸಂಸ್ಥೆಯ ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ, ವಿಜಯಪುರ.

**ಸಾರಾಂಶ: (Abstract):**

*ಯಾವುದೇ ಒಂದು ರಾಷ್ಟ್ರ ಅಥವಾ ಸಮುದಾಯ ಅಥವಾ ಕುಟುಂಬ ಅಭಿವೃದ್ಧಿಗೊಳ್ಳಬೇಕಾದರೆ ಅದರ ಆರ್ಥಿಕತೆ ಬಹು ಮುಖ್ಯವಾಗಿರುತ್ತದೆ. ಹಾಗೆಯೇ ಪ್ರಪಂಚದಲ್ಲಿ ಎಷ್ಟೋ ರಾಷ್ಟ್ರಗಳು ಈ ಆರ್ಥಿಕ ದಿವಾಳಿತನಕ್ಕೆ ಸಿಕ್ಕು ನರಳಿವೆ. 1789–1945ರ ವರೆಗೆ ಆರ್ಥಿಕತೆಗಾಗಿ ಹಲವಾರು ರಾಷ್ಟ್ರಗಳು ಹಲವಾರು ಒಕ್ಕೂಟ ವ್ಯವಸ್ಥೆಯನ್ನು ಮಾಡಿಕೊಂಡು ಯುದ್ಧಗಳನ್ನು ಮಾಡಿವೆ. ಹಾಗೆಯೇ ಪ್ರಪಂಚದ ಪ್ರಥಮ ಮಹಾಯುದ್ಧ ಮತ್ತು ದ್ವಿತಿಯ ಮಹಾಯುದ್ಧಗಳು ಜರುಗಿ ಆರ್ಥಿಕತೆಯ ಬುಡಮೇಲೂ ಆಗಿದೆ. ಆದರೂ ಎಷ್ಟೋ ಯುದ್ಧಗಳಾಗಲಿ ಆರ್ಥಿಕ ಪೈಪೋಟಿ ಅಥವಾ ಸ್ಪರ್ಧೆಗಳು ಎಂದು ಕೊನೆಯಾಗುವುದಿಲ್ಲ. ಆದ್ದರಿಂದ 1945ರಲ್ಲಿ ಸ್ಥಾಪಯಾದ ವಿಶ್ವಸಂಸ್ಥೆಯಲ್ಲಿ IMF, IBRD, World Bank, GATT, WTO ನಂತಹ ಅಂಗಸಂಸ್ಥೆಗಳು ಸ್ಥಾಪನೆಗೊಂಡು ಪ್ರಸ್ತುತದವರಗೆ ಆರ್ಥಿಕತೆಯನ್ನು ಅಭಿವೃದ್ಧಿ ಪಡಿಸುತ್ತಿವೆ.*

**ಮುಖ್ಯಪದಗಳು (Keywords):** ಸ್ವಾತಂತ್ರ್ಯ ಚಳವಳಿ, ಹೋರಾಟ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ.

## ಪೀಠಿಕೆ

ಇಡಿ ಪ್ರಪಂಚವು ಒಂದು ವಿಷಯದಲ್ಲಿ ಮಾತ್ರ ಏಕರೂಪದ ಅಭಿಪ್ರಾಯವನ್ನು ಹೊಂದಿದೆ. ಅದೇನೆಂದರೆ ಆರ್ಥಿಕ ಅಭಿವೃದ್ಧಿಗೆ ಕೈಗಾರಿಕಾ ಬೆಳವಣಿಗೆ ಅತೀ ಮುಖ್ಯವಾದುದ್ದು, ಆರ್ಥಿಕ ವ್ಯವಸ್ಥೆಯು ಪ್ರಮುಖ ಎರಡು ಬೆಳವಣಿಗೆಗಳನ್ನು ಅವಲಂಬಿಸಿರುತ್ತದೆ. ಅವುಗಳೆಂದರೆ ಕೃಷಿ ಕ್ಷೇತ್ರ ಮತ್ತು ಕೈಗಾರಿಕಾ ಕ್ಷೇತ್ರ. ಈ ಎರಡು ಕ್ಷೇತ್ರಗಳು ಹೊಂದಾಣಿಕೆಯಾಗಿ ಕಾರ್ಯನಿರ್ವಹಿಸಿದಾಗ ಮಾತ್ರ ಆರ್ಥಿಕತೆ ಅಭಿವೃದ್ಧಿಗೊಂಡು ಒಂದು ಬಲಿಷ್ಠ ರಾಷ್ಟ್ರವಾಗಲು ಸಾಧ್ಯವಾಗುತ್ತದೆ.[1] ಸಾಮಾನ್ಯವಾಗಿ ಹೇಳುವಂತೆ ಕೈಗಾರೀಕರಣ ಇಲ್ಲವೇ ವಿನಾಶ ಎಂಬ ಮಾತಿನ ನೆನಪಾಗುತ್ತದೆ.[2] 1900ರ ವೇಳೆಗೆ ಮೈಸೂರು ಒಡೆಯರಿಂದ ಸಂಸ್ಥಾನದ ತುಂಬ ಕೈಗಾರಿಕೆಗಳು ಪ್ರಾರಂಭವಾದವು.[3] ಈ ವೇಳೆಯಲ್ಲಿ ಸಂಸ್ಥಾನದಲ್ಲಿ ಒಂದು ಕಡೆ ರಾಷ್ಟೀಯ ಚಳವಳಿಗಳು ಪ್ರಾರಂಭವಾದರೆ ಇನ್ನೊಂದು ಕಡೆ ಕೈಗಾರಿಕೆಗಳ ಸ್ಥಾಪನೆಗಳು ನಡೆಯುತಿದ್ದವು. ಹಾಗೆಯೇ 1922ರಲ್ಲಿ ಹರಿಹರದಲ್ಲಿ ಸಾಹುಕಾರ್ ಮೂರ್ಖಲ್ ಮಾಲಿಂಗಪ್ಪನವರು ಹತ್ತಿ ಗಿರಣಿ, ಶೇಂಗಾ ಗಿರಣಿಯನ್ನು ಸ್ಥಾಪಿಸಿದರು.[4] ಈ ಗಿರಣಿಗಳಲ್ಲಿ ಕಾರ್ಮಿಕ ವರ್ಗವು ತನ್ನ ಬೇಡಿಕೆಗಳಿಗೆ

*Please cite this article as:* ಕೃಷ್ಣಮೂರ್ತಿ ಸಿ. ಎನ್. (2024). ಸ್ವಾತಂತ್ರ್ಯ ಚಳವಳಿಯ ಕಾಲಘಟ್ಟದ ಆರ್ಥಿಕ ಸ್ಥಿತಿಗತಿ ಮತ್ತು ದಾವಣಗೆರೆ ಜಿಲ್ಲೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(3). ಪು.ಸಂ.* 41–43

ಮತ್ತು ರಕ್ಷಣೆಗೆ ಕಾರ್ಮಿಕರು ಸಂಘಟನೆಗಳನ್ನು ಮಾಡಿಕೊಂಡಿದ್ದರು. ಈ ವಿಚಾರವನ್ನು ಸಾಹುಕಾರ್ ಮೂರ್ಖಲ್ ಮಾಲಿಂಗಪ್ಪನವರ ಮೊಮ್ಮಗನವರಾದ ಮೂರ್ಖಲ್ ಶಿವಲಿಂಗಪ್ಪರವರು ಸಂದರ್ಶನದ ವೇಳೆಯಲ್ಲಿ ತಿಳಿಸಿದರು.[5] ಇದರ ಉದ್ಯೋಗವನ್ನು ತಿಳಿದುಕೊಂಡು ಹರಿಹರ ತಾಲೂಕಿನ ರಾಜನಹಳ್ಳಿಯವರಾದ ಹನುಮಂತಪ್ಪನವರು 1936ರಲ್ಲಿ ದಾವಣಗೆರೆಯಲ್ಲಿ ದಿ ದಾವಣಗೆರೆ ಕಾಟನ್ ಮಿಲ್ ಸ್ಥಾಪಿಸಿದರು.[6] ರಾಜನಹಳ್ಳಿ ಹನುಮಂತಪ್ಪನವರ ಬಗ್ಗೆ ಶ್ರೀ ಯಜಮಾನ್ ಟಿ. ಜಯದೇವಪ್ಪನವರನ್ನು ವಿಚಾರಿಸಿದಾಗ ಶ್ರೀಯುತರು ಓದಿದ್ದು 3ನೇ ತರಗತಿ ಆದರೆ “ರಾಜನ ಬುದ್ಧಿ, ಹಳ್ಳಿಗನ ಪರಿಶ್ರಮಗುಣ, ಹನುಮಂತನ ಶಕ್ತಿ” ಈ ಎಲ್ಲಾ ಅಂಶಗಳು ಇವರ ಹೆಸರಿನಲ್ಲಿಯೇ ಇರುವುದರಿಂದ ದಾವಣಗೆರೆಯಲ್ಲಿ ಪ್ರಮುಖ ದಾನಿಗಳಲ್ಲಿ ಒಬ್ಬರಾಗಿದ್ದಾರೆ, (King + Village + Hanumanthappa) ಎಂದು ಹರಿಹರದ ಸಾಹುಕಾರ್ ಮೂರ್ಖಲ್ ಮಾಲಿಂಗಪ್ಪನವರು ಕರೆಯುತ್ತಿದ್ದರು ಎಂದು ಸಂದರ್ಶನದ ಸಮಯದಲ್ಲಿ ಹೇಳಿದರು.[7] 1936ರಲ್ಲಿ ದಿ ದಾವಣಗೆರೆ ಕಾಟನ್ ಮಿಲ್ ಪ್ರಾರಂಭದಲ್ಲಿ ಕೇವಲ 12 ಸಾವಿರ ಸ್ಪಿಂಡಲ್ಸ್‌ಗಳ ಉತ್ಪಾದಿಸುತಿತ್ತು. ನಂತರ ಶ್ರೀಯುತರ ಪರಿಶ್ರಮದ ಫಲವಾಗಿ 49048 ಸ್ಪಿಂಡಲ್ಸ್‌ಗಳ ಸಾಮರ್ಥ್ಯದವರೆಗೂ ಹೆಚ್ಚಿಸಲಾಯಿತು. ಈ ಕಾಟನ್ ಮಿಲ್ ಹತ್ತಿಯನ್ನು ನೂಲುವ, ನೇಯುವ, ಬಣ್ಣ ಹಾಕುವ ಎಲ್ಲಾ ವಿವಿಧ ಘಟಕಗಳನ್ನು ಹೊಂದಿತ್ತು. ರಾಜನಹಳ್ಳಿ ಹನುಮಂತಪ್ಪ, ರಾಜನಹಳ್ಳಿ ರಾಮಶೆಟ್ಟ್ರು ಮತ್ತು ರಾಜನಹಳ್ಳಿ ಶ್ರೀನಿವಾಸ ಮೂರ್ತಿ ಇವರು ಸುತ್ತಮುತ್ತಲು ರೈತರಿಂದ ಹತ್ತಿಯನ್ನು ಖರೀದಿಸುತ್ತಿದ್ದರು.[8] ಕಾರ್ಮಿಕರಿಗೆ ಮೂಲಭೂತ ಸೌಕರ್ಯವನ್ನು ಪಡೆದುಕೊಳ್ಳಲು ಕಾರ್ಮಿಕ ಸಂಘಗಳು ಹುಟ್ಟಿಕೊಂಡವು. 1945ರಲ್ಲಿ ಚಿಗಟೇರಿ ಮುರಿಗೆಪ್ಪ ಮತ್ತು ಗುಂಡಿ ಮಹದೇವಪ್ಪನವರು ಮೂಲತ ಹತ್ತಿ ವ್ಯಾಪಾರಿಗಳಾಗಿದ್ದು, ರೈತರಿಂದ ಹತ್ತಿಯನ್ನು ಖರೀದಿಸಿ ಶಂಕರ್ ಕಾಟನ್‌ಮಿಲ್ ಸ್ಥಾಪಿಸಿದರು.[9] 1946ರಲ್ಲಿ ಗುಂಡಿ ಮಹದೇವಪ್ಪ ಮತ್ತು ಸಹೋದರರು ಗಣೇಶ ಕಾಟನ್‌ಮಿಲ್ ಸ್ಥಾಪಿಸಿದರು. ಯಲ್ಲಮ್ಮ ಕಾಟನ್‌ಮಿಲ್, ಚಂದ್ರೋದಯ ಮಿಲ್, ಸಿದ್ದೇಶ್ವರ ಕಾಟನ್‌ಮಿಲ್, ಆಂಜನೇಯ ಕಾಟನ್‌ಮಿಲ್, ಚಿಗಟೇರಿ ಮಿಲ್ ಈ 8 ಮಿಲ್‌ಗಳು 1936ರಿಂದ 1963ರವರಗೆ ದಾವಣಗೆರೆಯ ಆರ್ಥಿಕತೆಯನ್ನು ಅಭಿವೃದ್ಧಿ ಪಡಿಸಿ ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಪ್ರಸಿದ್ಧವಾಯಿತು.[10] ಆದರೆ ಈ ಎಲ್ಲಾ ಕಾಟನ್ ಮಿಲ್‌ಗಳು 1980ರ ದಶಕದಲ್ಲಿ ನಗರದಲ್ಲಿ ಹಲವಾರು ಬದಲಾವಣೆಯಿಂದ ಮಾಯನಗರಿಯಾಗಿತು. 21ನೇ ಶತಮಾನದಲ್ಲಿ ಶೈಕ್ಷಣಿಕ ನಗರಿಯಾಗಿದೆ.

1941ರಲ್ಲಿ ಮೈಸೂರು ಮಹಾರಾಜರು ಹರಿಹರದಲ್ಲಿ ಮೈಸೂರು ಕಿರ್ಲೋಸ್ಕರ್ ಕಂಪನಿಯನ್ನು ಸ್ಥಾಪಿಸಿದರು. ಆ ವರ್ಷವೇ ಹರಿಹರದಲ್ಲಿ ಮೈಸೂರು ಕಾಂಗ್ರೆಸ್‌ನ 4ನೇ ಅಧಿವೇಶನ ನಡೆದು ರಾಷ್ಟ್ರೀಯತೆಯಿಂದ ಪ್ರೇರಣೆಗೊಂಡಿದ್ದ ಜನರು ಈ ಕಾರ್ಖಾನೆಯಲ್ಲಿಯು ಕಾರ್ಮಿಕ ಸಂಘಗಳನ್ನು ರಚಿಸಿಕೊಂಡು 1942ರ ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಕಾರ್ಮಿಕರು ಸಹ ದೇಶದ ದಾಸ್ಯ ಬಿಡಿಸಲು ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿದರು. ಆದರೆ ಆರ್ಥಿಕತೆಯ ತೊಂದರೆಯಾದರೆ ಇಲ್ಲಿ ಈ ಬಂಡವಾಶಾಹಿಗಳೆ ಸ್ವಾತಂತ್ರ್ಯ ಹೋರಾಟಕ್ಕೆ ಪರೋಕ್ಷವಾಗಿ ಬೆಂಬಲವನ್ನು ಕೊಡುತ್ತಿದ್ದರು. ಎಂದು ಬೋಂಗಾಳೆ ಕೃಷ್ಣಪ್ಪನವರು ಸಂದರ್ಶನದ ಸಮಯದಲ್ಲಿ ಹೇಳಿದರು.[11] ಹೀಗೆ ಸ್ವಾತಂತ್ರ್ಯ ಹೋರಾಟದಲ್ಲಿ ದಾವಣಗೆರೆ ಆರ್ಥಿಕತೆಯ ವಿವಿಧ ಹಂತಗಳು ಬಹುಮುಖ್ಯವಾಗಿ ಕಂಡುಬರುತ್ತದೆ.

ಹೀಗಾಗಿದಾವಣಗೆರೆ ಜಿಲ್ಲೆಯು ಕೈಗಾರಿಕೆಗಳಿಂದ ಆರ್ಥಿಕವಾಗಿ ಪ್ರಬಲವಾಗಿ ಬೆಳೆದು ಕರ್ನಾಟಕದ ಮ್ಯಾಂಚೆಸ್ಟರ್ ಎಂದೇ ಪ್ರಸಿದ್ಧವಾಯಿತುನಂತರದಲ್ಲಿ ಶೈಕ್ಷಣಿಕ ನಗರಿಯಾಗಿ ರೂಪಗೊಂಡಿದೆ. ಪ್ರಸ್ತುತ ದಾವಣಗೆರೆ ಜಿಲ್ಲೆಯನ್ನು (ಬೆಣ್ಣೆದೋಸೆ ನಗರಿ, ದೇವನಗರಿ, ಖಾರಮಂಡಕ್ಕಿ ನಗರಿ, ವಿದ್ಯಾಕಾಶಿ)ಹಲವಾರು ಹೆಸರುಗಳಿಂದ ಕರೆಯುತ್ತಾರೆ.ಇದು ಕರ್ನಾಟಕದ ಎರಡನೇ ರಾಜಧಾನಿ, ಕರ್ನಾಟಕದ ಹೃದಯ ಭಾಗ, ಶೇರವೇಗದಲ್ಲಿ ಬೆಳದ ರೇವುಪಟ್ಟಣ ಎನ್ನುವುದರ ಜೊತೆಗೆ ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಜಿಲ್ಲೆಯಾಗಿದೆ.

**ಆಕರ ಗ್ರಂಥಗಳು**


1. ವಕ್ತೃ: ಚಂದ್ರಶೇಖರಯ್ಯನವರು, ಎನ್. ಎಂ. ಸಂದರ್ಶನ, ದಿನಾಂಕ: 04–03–2012.
2. ವಕ್ತೃ: ಚಂದ್ರಶೇಖರಯ್ಯನವರು, ಎನ್.ಎಂ. ಸಂದರ್ಶನ, ದಿನಾಂಕ: 04–03–2012.
3. ವಕ್ತೃ: ಗೌಡ್ರ ಸಿದ್ದಪ್ಪ, ಸಂದರ್ಶನ, ದಿನಾಂಕ:18–03–2012.
4. ವಕ್ತೃ: ನಾಯಕ, ಎಂ. ವಿ. ಸಂದರ್ಶನ, ದಿನಾಂಕ: 27–04–2012.
5. ವಕ್ತೃ: ಸಾಹುಕಾರ್ ಮೂರ್ಕಲ್ ಶಿವಲಿಂಗಪ್ಪ,ಸಂದರ್ಶನ,ದಿನಾಂಕ: 08–01–2014.
6. ವಕ್ತೃ: ಆಲೂರು ಬಸವರಾಜಪ್ಪ, ಸಂದರ್ಶನ,ದಿನಾಂಕ: 10–08–2013.
7. ವಕ್ತೃ: ಯಜಮಾನ್ ಟಿ. ಜಯದೇವಪ್ಪ, ದಿನಾಂಕ: 05–06–2012.
8. ವಕ್ತೃ: ಸಾಹುಕಾರ್ ಮೂರ್ಕಲ್ ಶಿವಲಿಂಗಪ್ಪ,ಸಂದರ್ಶನ,ದಿನಾಂಕ: 08–01–2014.
9. ವಕ್ತೃ: ಆಲೂರು ಬಸವರಾಜಪ್ಪ, ಸಂದರ್ಶನ,ದಿನಾಂಕ: 10–08–2013.
10. ಕ್ಷೇತ್ರಕಾರ್ಯ, ದಾವಣಗೆರೆ, ದಿನಾಂಕ: 11–04–2012.
11. ವಕ್ತೃ: ಬೋಂಗಾಳೆ ಕೃಷ್ಣಪ್ಪ, ಸಂದರ್ಶನ, ದಿನಾಂಕ: 22–03–2012.